ಆ) ಅಧ್ಯಕ್ಷರು ಮೀಟಿಂಗ್ ಆದ ರರಾವುಗಳನಲ್ಲದೇ ಹೊಟ್ಟ ರರಾವುಗಳನ್ನೂ ಬರೆದಿದ್ದಾರೆಂದು ತಿಳಿದು ಬಂದಿದ್ದು, ಇಲ್ಲಿಯವರೆಗೆ ಜನರಲ್ ಕಮಿಟಿ ರರಾವಿನ ನಕಲು ಕೊಟ್ಟಿರುವುದಿಲ್ಲವೆಂಬುದರ ಬಗ್ಗೆ ವಿಚಾರಣೆ ಮಾಡಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಮತ್ತು ಆ) ದಿನಾಂಕ 5 10 2005ರ ಮಾನ್ಯ ಶಾಸಕರ ಪತ್ರಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿ, ಮುಂಡರಗಿ, ಗದಗ್ ಜಿಲ್ಲಾ ರವರು ಯಾವುದೇ ಮಾಹಿತಿ ನೀಡದೇ ಇರುವ ಬಗ್ಗೆ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವಿಚಾರಿಸಿ ಪೂರ್ಣ ವರದಿಯನ್ನು ನೀಡಲು ಈಗಾಗಲೇ ಸೂಚಿಸಿರುತ್ತಾರೆ

529(352) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮುಂಡರಗಿ ತಾಲ್ಲೂಕು ಶಿಂಗಾಟಾಲೂರು (ಹುಲಿಗುಡ್ಡ) ಏತ ನೀರಾವರಿ ಕಾಮಗಾರಿ ಯಾವಾಗಿನಿಂದ ಪ್ರಾರಂಭವಾಗಿದೆ,

ಆ) ಈ ಯೋಜನೆ ಮುಗಿದು ಎಂದಿನಿಂದ ರೈತರಿಗೆ ನೀರಾವರಿ ಒದಗಿಸಲಾಗುತ್ತದೆ,

ಇ) ಈ ಯೋಜನೆಯಲ್ಲಿ ಎಷ್ಟು ಗ್ರಾಮಗಳು ಮುಳುಗಡೆಯಾಗುತ್ತವೆ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸಲಾಗಿದೆಯೇ, (ವಿವರ ನೀಡುವುದು)

ಈ) ಈ ಯೋಜನೆಯಲ್ಲಿ ರೈತರ ಜಮೀನುಗಳು ಎಷ್ಟು ಎಕರೆ ಮುಳುಗಡೆಯಾಗುತ್ತದೆ ಮತ್ತು ರೈತರಿಗೆ ಪರಿಹಾರ ಕೊಡಲಾಗಿದೆಯೇ ಹಾಗೂ ಪ್ರತಿ ಎಕರೆಗೆ ಎಷ್ಟು ಹಣ ಸರ್ಕಾರ ನಿಗದಿ ಮಾಡಲಾಗಿದೆ,

ಉ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ಮತ್ತು ಯಾವ ಯಾವ ತಾಲ್ಲೂಕುಗಳಿಗೆ ಎಷ್ಟು ಎಕರೆ ನೀರಾವರಿ ಆಗುತ್ತದೆ, (ವಿವರ ನೀಡುವುದು)?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಈ ಯೋಜನೆಯು 1992ರಲ್ಲಿ ಪ್ರಾರಂಭಗೊಂಡಿದೆ

ಆ) 2009–10ರ ಸಾಲಿನ ಅಂತ್ಯದೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ

ಇ) ಗುಮ್ಮಗೋಳ ಗ್ರಾಮವು ಪೂರ್ಣ ಮುಳುಗಡೆಯಾಗುತ್ತದೆ ಅಲ್ಲಿಪುರ ಮತ್ತು ಬೀದರಹಳ್ಳಿ ಗ್ರಾಮಗಳು ಭಾಗಶಃ ಮುಳುಗಡೆಯಾಗುತ್ತದೆ ಪುನರ್‌ವಸತಿಯ ಮಾಸ್ಟರ್ ಪ್ಲಾನ್‌ನ್ನು ರೂ 13 ಕೋಟಿಗಳಿಗೆ ತಯಾರಿಸಿದ್ದು, ಇದು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ ಪುನರ್ ವಸತಿ ಕಲ್ಪಿಸುವ ಪ್ರಕ್ರಿಯೆಗಳು ಜಾರಿಯಲ್ಲಿದೆ ಈ ಸಂಬಂಧ ಅಲ್ಲಿಪುರ ಗ್ರಾಮದ ಪುನರ್‌ವಸತಿಗಾಗಿ 40 ಎಕರೆ ಪ್ರದೇಶವನ್ನು ಗುರುತಿಸಿದ್ದು, ಭೂಸ್ವಾಧೀನಕ್ಕಾಗಿ 4(1) ಅಧಿಸೂಚನೆ ಹೊರಡಿಸಲಾಗಿದೆ

ಈ) ಈ ಯೋಜನೆಯಲ್ಲಿ 2889 ಎಕರೆ 38 ಗುಂಟೆ ಜಮೀನು ಮುಳುಗಡೆಯಾಗುತ್ತದೆ ಸರ್ಕಾರಿ ಆದೇಶ ಸಂಖ್ಯೆ ಕಂಇ/21/ಭೂಸ್ವಾಳ/06, ದಿನಾಂಕ 4 1 07ರಲ್ಲಿ ಈ ಕೆಳಕಂಡಂತೆ ದರಗಳನ್ನು ನಿಗದಿಪಡಿಸಿದೆ

1 ಒಣಭೂಮಿ ರೂ 1,05,300 (ಪ್ರತಿ ಎಕರೆಗೆ)

2 ಒಂದು ಬೆಳೆ ತರಿಭೂಮಿ ರೂ 1,75,500 (ಪ್ರತಿ ಎಕರೆಗೆ)

3 ಎರಡು ಬೆಳೆ ತರಿಭೂಮಿ ರೂ 2,33,300 (ಪ್ರತಿ ಎಕರೆಗೆ)

ಉ) ಈ ಯೋಜನೆಯ ಅಂದಾಜು ಮೊತ್ತ ರೂ 657 00 ಕೋಟಿಗಳು ಯೋಜನೆಗೆ ಡಿಸೆಂಬರ್ 2006ರ ಅಂತ್ಯದವರೆಗೆ ರೂ 98 12 ಕೋಟಿಗಳನ್ನು ವೆಚ್ಚ ಮಾಡಲಾಗಿದೆ ನೀರಾವರಿಯಾಗುವ ತಾಲ್ಲೂಕುಗಳ ವಿವರಗಳು ಈ ಕೆಳಗಿನಂತಿವೆ

ತಾಲ್ಲೂಕು	ಎಕರೆ
ಮುಂಡರಗಿ	32,982
ಕೊಪ್ಪಳ	12,390

ಗದಗ	39,073
ಹೂವಿನಹಡಗಲಿ	35,791
ಒಟ್ಟು	**120,236**

530(555) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಮನೆಗಳನ್ನು ನಿರ್ಮಿಸಿ ಕೊಡುವ ಸರ್ಕಾರದ ಆಶ್ವಾಸನೆ ಪ್ರಗತಿಯಲ್ಲಿದೆಯೇ, ಇದ್ದಲ್ಲಿ ಆ ಕುರಿತಾದ ವಿವರಗಳೇನು,

ಆ) ಗ್ರಾಮೀಣ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರುಗಳಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ತುರ್ತು ಕ್ರಮಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇದೆ

ಮನೆ ನಿರ್ಮಾಣದ ಬಗ್ಗೆ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ

ಆ) ಪ್ರಥಮ ಹಂತದಲ್ಲಿ ರಾಜ್ಯದ ಶೈಕ್ಷಣಿಕವಾಗಿ ಅತೀ ಹಿಂದುಳಿದ 61 ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ಚಿಂತನೆ ನಡೆಸಲಾಗಿದ್ದು, ಇದಕ್ಕಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

531(556) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2005–06 ಮತ್ತು 2006–07ನೇ ಸಾಲಿಗೆ ಬೆಳ್ತಂಗಡಿ ನಗರ ಪಂಚಾಯತ್ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನು ಒದಗಿಸಿಕೊಡಲು ಮಂಜೂರು ಮಾಡಿದ ಮತ್ತು ಬಿಡುಗಡೆ ಮಾಡಿದ ಹಣದ ಮೊತ್ತ ಎಷ್ಟು,